**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತುಮಕೂರು-ಮಧುಗಿರಿ**

**ಎಸ್.ಸಿ.ಸಂಖ್ಯೆ** 5016/2025 ಫ್ರಾಸಾ-03
ಚಾಸಾ-03

ದಿನಾಂಕಃ 20-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಯಶೋದಮ್ಮ |
| **ತಂದೆಯ / ಗಂಡನ ಹೆಸರು** | ಲಕ್ಷ್ಮೀಕಾಂತ್ |
| **ವಯಸ್ಸು** | 41 |
| **ಉದ್ಯೋಗ** | ಗೃಹಿಣಿ |
| **ವಾಸಸ್ಥಳ** | ಮಲ್ಲೆಕಾವು |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ಚಾಸಾ-1 ನನ್ನ ಗಂಡ , ಚಾಸಾ-2 ನನ್ನ ಮಾವ, ಆರೋಪಿ ರಾಮಚಂದ್ರಯ್ಯ ಚಾಸಾ-2 ರವರ ತಮ್ಮ, ಅಂದರೆ ನನ್ನ ಚಿಕ್ಕಮಾವ. ನನ್ನ ಮಾವ ಮತ್ತು ಆತನ ಅಣ್ಣ ತಮ್ಮಂದಿರು ಆಸ್ತಿ ವಿಭಾಗ ಮಾಡಿಕೊಂಡು ಬೇರೆ ಬೇರೆ ವಾಸ ಮಾಡುತ್ತಿದ್ದಾರೆ. ನಮ್ಮ ಮತ್ತು ಆರೋಪಿತನ ಮಧ್ಯೆ ಜಮೀನು ವಿವಾದ ಇತ್ತು. ಈಗ ಜಮೀನಿನು ವಿವಾದ ಇರುವುದಿಲ್ಲ ಸಮಸ್ಯೆ ಬಗೆಹರಿದಿರುತ್ತದೆ, ಆರೋಪಿ ನನ್ನ ಮಾವನ ಮೇಲೆ ಯಾವುದೇ ಹಲ್ಲೆ ಮಾಡಿರುವುದಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಫ್ರಾಣ ಬೆದರಿಕೆ ಹಾಕಿರುವುದಿಲ್ಲ.

ನ್ಯಾಯಾಲಯದಲ್ಲಿರುವ ಸ್ಥಳ ಪಂಚನಾಮೆಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಸ್ಥಳ ಪಂಚನಾಮೆಯನ್ನು ನಿಪಿ-6 ಎಂದು, ಸಾಕ್ಷಿ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಕೊರಟಗೆರೆ ಪೊಲೀಸ್ ಠಾಣೆಯಲ್ಲಿ ನಿಪಿ-6 ರ ಮೇಲೆ ಸಹಿ ಮಾಡಿರುತ್ತೇನೆ. ನಿಪಿ-6 ರಲ್ಲಿ ಬರೆದ ವಿಚಾರ ನನಗೆ ಗೊತ್ತಿರುವುದಿಲ್ಲ.

ನ್ಯಾಯಾಲಯದಲ್ಲಿರುವ ಅಮಾನತ್ತು ಪಂಚನಾಮೆಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಅಮಾನತ್ತು ಪಂಚನಾಮೆಯನ್ನು ನಿಪಿ-7 ಎಂದು, ಸಾಕ್ಷಿ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಕೊರಟಗೆರೆ ಪೊಲೀಸ್ ಠಾಣೆಯಲ್ಲಿ ನಿಪಿ-7 ರ ಮೇಲೆ ಸಹಿ ಮಾಡಿರುತ್ತೇನೆ. ನಿಪಿ-7 ರಲ್ಲಿ ಬರೆದ ವಿಚಾರ ನನಗೆ ಗೊತ್ತಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

ನ್ಯಾಯಾಲಯದ ಮುಂದೆ ಇರುವ 4 ಪೊಟೋಗಳನ್ನು ನೋಡಿದ್ದು, ಅದರಲ್ಲಿ ತನ್ನ ಇರುವಿಕೆಯನ್ನು ಗುರುತಿಸಿರುತ್ತಾರೆ, ಸದರಿ ಪೊಟೋಗಳನ್ನು ನಿಪಿ-8 ರಿಂದ 11 ಎಂದು ಗುರುತಿಸಲಾಯಿತು. ನಿಪಿ-8 ರಿಂದ 11 ಪೊಟೋಗಳನ್ನು ನಮ್ಮ ಮನೆ ಹತ್ತಿರ ಮತ್ತು ಪೊಲೀಸ್ ಠಾಣೆಯಲ್ಲಿ ತೆಗೆದಿರುತ್ತಾರೆ. ಯಾವ ವಿಚಾರಕ್ಕೆ ತೆಗೆದಿರುತ್ತಾರೆಂದು ನನಗೆ ಗೊತ್ತಿಲ್ಲ ಮತ್ತು ಏನನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ಪೊಲೀಸರ ಮುಂದೆ ನಾನು ಹೇಳಿಕೆ ಕೊಟ್ಟಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಮು.ಮಾ-1 ಮತ್ತು 2 ನ್ನು ನೋಡಿ ಗುರುತಿಸಿರುವುದಿಲ್ಲ ಮತ್ತು ಮುದ್ದೆ ಮಾಲುಗಳನ್ನು ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-**

ದಿ.27.04.2024 ರಂದು ಸಾಯಂಕಾಲ 5-30 ಗಂಟೆಗೆ ನಾನು ಮತ್ತು ಚಾಸಾ-2 ನಮ್ಮ ಮನೆ ಬಳಿ ಆರೋಪಿ ನಮ್ಮ ಮನೆ ಹತ್ತಿರ ಬಂದು ಅವಾಚ್ಯ ಶಬ್ದಗಳಿಂದ ಬೈದು ಜಮೀನು

ಕೊಡುವುದಿಲ್ಲವೇನು ನಮ್ಮ ಹೆಸರಿಗೆ ದಾಖಲೆಗಳನ್ನು ಮಾಡಿಸಿಕೊಡುವುದಿಲ್ಲವೇನು ಎಂದು ಅವಾಚ್ಯ ಶಬ್ದಗಳಿಂದ ಬೈದನು , ಆಗ ಚಾಸಾ-2 ರವರು 4 ಜನರಿಗೆ ಸಮಾನವಾಗಿ ಜಮೀನು ಕೊಟ್ಟಿದ್ದೆನೆ ಎಂದು ಹೇಳಿದಾಗ ಆರೋಪಿ ತಾನು ತಂದಿದ್ದ ಡ್ರಾಗನ್ ನಿಂದ ಚಾಸಾ-2 ರವರಿಗೆ ಕೊಲೆ ಮಾಡು ಉದ್ದೇಶದಿಂದ ತಲೆಗೆ ಚುಚ್ಚಿ ರಕ್ತಗಾಯಪಡಿಸಿ ಕೆಳಗೆ ಕೆಡವಿಕೊಂಡು ಮಚ್ಚನ್ನು ತೆಗೆದುಕೊಂಡು ನಮ್ಮ ಮಾವನ ಬಲಗೈ , ಎಡಕಾಲಿನ ಮೊಣಕಾಲಿನ ಕೆಳ ಭಾಗಕ್ಕೆ ಹೊಡೆದು ಕೊಲೆ ಮಾಡಲು ಪ್ರಯತ್ನಿಸಿದನು ಅಷ್ಟರಲ್ಲಿ ನಾನು ಚಾಸಾ-4 ಬಂದು  ಇಬ್ಬರು ಜೊರಾಗಿ ಕೂಗಿದಾಗ ಆರೋಪಿ ರಾಮಚಂದ್ರ ಈ ದಿನ ನೀನು ಬದುಕಿಕೊಂಡೆ ಮುಂದೊಂದು ದಿನ ನಿನಗೆ ಗತಿ ಕಾಣಿಸುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿ ಡ್ರಾಗನ್ ಮತ್ತು ಮಚ್ಚನ್ನು ಸ್ಥಳದಲ್ಲಿಯೇ ಬಿಸಾಗಿ ಹೊರಟುಹೋದನು ಎಂದರೆ ಸರಿಯಲ್ಲ.

ಗಾಯಗೊಂಡಿದ್ದ ನನ್ನ ಮಾವನನ್ನು ಆಟೋದಲ್ಲಿ ಕೊರಟಗೆರೆ ಸಾರ್ವಜನಿಕ ಆಸ್ಪತ್ರೆಗೆ ಕರೆದುಕೊಂಡು ನಂತರ ವೈದರ ಸಲಹೆ ಮೇರೆಗೆ ತುಮಕೂರು ಜಿಲ್ಲಾ ಆಸ್ಪತ್ರೆಗೆ ಚಾಸಾ-1 ರವರು ಆಂಬುಲೆಯನ್ಸ್ ನಲ್ಲ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ, ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-12 ಎಂದು ಗುರುತಿಸಲಾಯಿತು. ಈ ಬಗ್ಗೆ ಚಾಸಾ-1 ರವರು ದೂರು ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಚಾಸಾ-1 ರವರು ದೂರು ಕೊಟ್ಟ ನಂತರ ದಿ. 28.04.2024 ರಂದು ಬೆಳಿಗ್ಗೆ 8-00 ರಿಂದ 9-00 ಗಂಟೆಯವರೆಗೆ ಮಲ್ಲೆಕಾವು ಗ್ರಾಮದ ನಮ್ಮ ಮನೆ ಮುಂಭಾಗದಲ್ಲಿ ಪೊಲೀಸರು ಸ್ಥಳಕ್ಕೆ ಬಂದು ನಾನು ತೋರಿಸಿದ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ನಿಪಿ-6 ರಂತ ಪಂಚರ ಸಮಕ್ಷಮ ಮಾಡಿ ಪಂಚನಾಮೆ ಕಾಲಕ್ಕೆ ರಕ್ತರಹಿತ ಮತ್ತು ರಕ್ತಸಹಿತ ಮಣ್ಣನ್ನು ಮತ್ತು ಸ್ಥಳದಲ್ಲಿ ಬಿದಿದ್ದ ರಕ್ತವನ್ನು ಮತ್ತು ಡ್ರಾಗರ್  ಮತ್ತು ಮಚ್ಚನ್ನು ಅಮಾನತ್ತುಪಡಿಸಿಕೊಂಡು ನನ್ನ ಸಹಿ ತೆಗೆದುಕೊಂಡರು ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಕಾಲಕ್ಕೆ ನಿಪಿ-8 ರಿಂದ 10 ರಂತೆ ಪೊಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

**ಚಾಸಾ-03**

ದಿ. 229.04.2024 ರಂದು ಬೆಳಿಗ್ಗೆ 10-30 ರಿಂದ 11-15 ಗಂಟೆಯವರೆಗೆ ಕೊರಟಗೆರೆ ಪೊಲೀಸ್ ಠಾಣೆಯಲ್ಲಿ ತಮ್ಮ ಮಾವ ಕೃತ್ಯದ ಸಮಯದಲ್ಲಿ ಧರಿಸಿದ್ದ ಬಟ್ಟೆಯನ್ನು ನಾನು ಹಾಜರುಪಡಿಸಿದ್ದು ಸದರಿ ಬಟ್ಟೆಗಳನ್ನು ಪಂಚರ ಸಮಕ್ಷಮ ನಿಪಿ-7 ರಂತೆ ಪಂಚನಾಮೆ ಮಾಡಿ ಅಮಾನತ್ತುಪಡಿಸಿಕೊಂಡು ನನ್ನ ಸಹಿ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ನಿಪಿ-11 ರಂತೆ ಪೊಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಎಲ್ಲಾ ಘಟನೆಯನ್ನು ಕಣ್ಣಾರೆ ಕಂಡಿದ್ದರೂ ಮತುತ ನನ್ನ ಸಮಕ್ಷಮ ಪಂಚನಾಮೆ ಮಾಡಿ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿದ್ದರೂ ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**